# AUGUST 31, 2024

## AKASHAVANI - DHARWAD

## PRADESH SAMACHARA (KANNADA) 07.05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಕಳಸಾ–ಬಂಡೂರಿ ಯೋಜನೆ; ಕೇಂದ್ರ ಪರಿಸರ ಸಚಿವಾಲಯದಿಂದ, ತೀರುವಳಿ ನೀಡಿಕೆ ನಿರೀಕ್ಷೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಬೆಳಗಾವಿ ಹಾಗೂ ಹುಬ್ಬಳ್ಳಿ ಮಧ್ಯೆ, ನೂರು ಎಕರೆ ಜಾಗೆಯಲ್ಲಿ, ಸ್ಟಾರ್ಟ್ ಅಪ್ ಪಾರ್ಕ್ – ಎಂ.ಬಿ.ಪಾಟೀಲ.**
- **ಬೆಂಬಲ ಬೆಲೆ ಯೋಜನೆ; ಉದ್ದು, ಸೋಯಾಬೀನ್ ಮತ್ತು ಸೂರ್ಯಕಾಂತಿ ಖರೀದಿಗೆ, ಕೇಂದ್ರದ ಅನುಮತಿ – ಪ್ರಲ್ಹಾದ ಜೋಶಿ.**
- **'ಎನಿವೇರ್ ರಿಜಿಸ್ಟ್ರೇಷನ್' ಪ್ರಾವಧಾನ; ಸೆಪ್ಟೆಂಬರ್ 2ನೇ ತಾರೀಖಿನಿಂದ, ರಾಜ್ಯಾದ್ಯಂತ ಎಲ್ಲಿಯೂ ಸ್ಥಿರಾಸ್ತಿ ನೊಂದಣಿಗೆ ಅವಕಾಶ.**

<><><>

**ಈಗ ವಾರ್ತೆಗಳ ವಿವರ**

<><><>

**ಕಳಸಾ–ಬಂಡೂರಿ ನಾಲೆಗಳ, ಮಹಾದಾಯಿ ತಿರುವು ಯೋಜನೆಗೆ, ಚಾಲನೆ ನೀಡಲು ಸರ್ಕಾರ ಸಿದ್ಧವಿದೆ. ಕೇಂದ್ರದ ಪರಿಸರ ಸಚಿವಾಲಯದಿಂದ, ತೀರುವಳಿ ನೀಡಿಕೆ ಬಾಕಿ ಇದೆ. ಪರವಾನಗಿ ನಿರೀಕ್ಷಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.**

<><><>

**ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲೂಕು, ಮಾಲತೇಶ ದೇವರ ಸನ್ನಿಧಿಯ, ದೇವರಗುಡ್ಡವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ದೇವರಗುಡ್ಡ ಅಭಿವೃದ್ಧಿ ಪ್ರಾಧಿಕಾರದ ವಿರುದ್ಧದ ತಡೆಯಾಜ್ಞೆ ತೆರವುಗೊಳಿಸಲು, ಸರ್ಕಾರ ಕಾನೂನು ಕ್ರಮ ಕೈಗೊಳ್ಳಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ದೇವಸ್ಥಾನದಲ್ಲಿ ವಿಶೇ ’ ಪೂಜೆ ಸಲ್ಲಿಸಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕಂಚಿನ ಪುತ್ಥಳಿ ಅನಾವರಣ ಹಾಗೂ ಶ್ರೀ ಕನಕ ಭವನ ಉದ್ಘಾಟಿಸಿ, ಅವರು ಮಾತನಾಡಿದರು. ದೇವರಗುಡ್ಡಕ್ಕೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು ಎಂದರು.**

<><><>

ನಾಳೆ ಸೆಪ್ಟೆಂಬರ್ 1 ರಿಂದ, ಪ್ರತಿ ತಿಂಗಳು ಆಹಾರ ಸುರಕ್ಷತಾಧಿಕಾರಿಗಳ ಜಿಲ್ಲಾವಾರು ತಂಡ, ರೆಸ್ಟೋರೆಂಟ್, ಹೊಟೇಲ್ ಸೇರಿದಂತೆ ಇತರೆ ಆಹಾರ ತಯಾರಿಕಾ ಘಟಕಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ವರದಿಯನ್ನು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಲಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ, ಆಹಾರ ಸುರಕ್ಷತಾ ಇಲಾಖೆಗೆ ಸ್ಪ ್ಟ ನಿರ್ದೇಶನ ನೀಡಲಾಗಿದೆ. ಆರಂಭಿಕ ಹಂತವಾಗಿ ಇಂದು ರಾಜ್ಯದ ಎಲ್ಲೆಡೆ ವಿಶೇಷ ಜಾಥಾ ಆಯೋಜಿಸಲಾಗಿದೆ ಎಂದರು.

<><><>

ಬೆಂಗಳೂರು ಹೊರತು ಪಡಿಸಿ, ರಾಜ್ಯದ ಇತರೆ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಸರ್ಕಾರ ವಿಶೇಷ ಆದ್ಯತೆ ನೀಡಿದೆ. ಖಾಸಗಿ ವಲಯದ ಉದ್ಯಮಿಗಳಿಗೆ ಮನವರಿಕೆ ಮಾಡಲಾಗುತ್ತಿದೆ ಎಂದು ಕೈಗಾರಿಕಾ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿ ಹಾಗೂ ಹುಬ್ಬಳ್ಳಿ ಮಧ್ಯೆ ನೂರು ಎಕರೆ ಪ್ರದೇಶದಲ್ಲಿ, ಸ್ಟಾರ್ಟ್ ಅಪ್ ಪಾರ್ಕ್ ಹಾಗೂ ಕೈಗಾರಿಕಾ ಪಥ ನಿರ್ಮಿಸಲು, ಯೋಜಿಸಲಾಗಿದೆ. ಬೆಳಗಾವಿ – ಗೋವಾ ರಾಷ್ಟ್ರೀಯ ಹೆದ್ದಾರಿ ಪಕ್ಕ, ಫೌಂಡ್ರಿ ಪಾರ್ಕ್ ನಿರ್ಮಾಣಕ್ಕೆ ಯೋಜಿತ ಪ್ರಯತ್ನ ಮುಂದುವರಿದಿದೆ ಎಂದರು.

<><><>

ವಿದ್ಯುತ್ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ರಾಜ್ಯದಲ್ಲಿ, ಕುಸುಮ್ 'ಬಿ' ಮತ್ತು ಕುಸುಮ್ 'ಸಿ' ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಲಾಗಿದೆ ಎಂದು, ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ. ಕೋಲಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳ ಜೊತೆ ಸಚಿವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಕುಸುಮ್ 'ಬಿ' ಯೋಜನೆಯಡಿ, ಸೋಲಾರ್ ಪಂಪ್ ಸೆಟ್ ಗಳನ್ನು ಅಳವಡಿಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಶೇಕಡ 30 ಮತ್ತು ರಾಜ್ಯ ಸರ್ಕಾರದಿಂದ ಶೇಕಡ 50 ರ ್ಟ ಸಬ್ಸಿಡಿ ನೀಡಲಾಗುತ್ತಿದೆ. ಒಟ್ಟು ವೆಚ್ಚದ ಶೇಕಡ 20 ರಷ್ಟನ್ನು ಫಲಾನುಭವಿ ಭರಿಸಿದರೆ, ರೈತರಿಗೆ ಸರ್ಕಾರದಿಂದಲೇ ಪಂಪ್ ಸೆಟ್ ಅಳವಡಿಸಿಕೊಡಲಾಗುವುದು ಎಂದರು.

<><><>

ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕು ಕಾಮನೂರು ಆಯು ್ಮನ್ ಆರೋಗ್ಯ ಮಂದಿರಕ್ಕೆ, ರಾಷ್ಟ್ರೀಯ ಮಾನ್ಯತೆ ದೊರೆತಿದೆ ಎಂದು, ಜಿಲ್ಲಾ ಆಯು ್ ಅಧಿಕಾರಿ ಡಾಕ್ಟರ್ ಪಿ.ಬಿ. ಹಿರೇಗೌಡರ ತಿಳಿಸಿದ್ದಾರೆ. ಕರ್ನಾಟಕ ಆಯು ್ ಇಲಾಖೆಯ 50 ಆಯು ್ಮನ್ ಆರೋಗ್ಯ ಮಂದಿರಗಳಿಗೆ ರಾಷ್ಟ್ರೀಯ ಮಾನ್ಯತೆ ದೊರೆತಿದ್ದು, ಈ ಪೈಕಿ ಕಾಮನೂರು ಕೇಂದ್ರವೂ ಸೇರಿರುವುದು ಸಂತಸದ ಸಂಗತಿ. ಕಾಮನೂರು ಗ್ರಾಮದ ಆಯು ್ಮನ್ ಆರೋಗ್ಯ ಮಂದಿರಕ್ಕೆ ರಾಷ್ಟ್ರೀಯ ಮಾನ್ಯತೆ ದೊರೆತಿರುವುದು ಜಿಲ್ಲೆ ಮತ್ತು ರಾಜ್ಯಕ್ಕೆ ಹೆಮ್ಮೆಯ ವಿ ’ಯ ಎಂದು ಅವರು, ತಿಳಿಸಿದ್ದಾರೆ.

<><><>

ಡಾಕ್ಟರ್ ಅರವಿಂದ ಪನಗರಿಯಾ ನೇತೃತ್ವದ 16ನೇ ಹಣಕಾಸು ಆಯೋಗದ ಕೇಂದ್ರ ನಿಯೋಗ, ವಿಜಯನಗರ ಜಿಲ್ಲೆಯ ಹಂಪಿಗೆ ಭೇಟಿ ನೀಡಿ, ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಿಸಿತು.

<><><>

ಕೇಂದ್ರ ಸರ್ಕಾರದ ನೀತಿ ಆಯೋಗ ಜಾರಿಗೊಳಿಸಿರುವ, ಆಶೋತ್ತರ ತಾಲೂಕು ಯೋಜನೆ ಅಡಿ, ಬೀದರ್ ಜಿಲ್ಲೆಯ ಮಹತ್ವಾಕಾಂಕ್ಷಿ ತಾಲೂಕು ಚಿಟಗುಪ್ಪ ವ್ಯಾಪ್ತಿಯ, ಬೆಳಕೇರಾ ಗ್ರಾಮ ಪಂಚಾಯ್ತಿಯಲ್ಲಿ, 'ಸಂಪೂರ್ಣತಾ ಅಭಿಯಾನ'ದ ಅಂಗವಾಗಿ, ಸಾರ್ವಜನಿಕರಿಗೆ ಆರೋಗ್ಯ ತಪಾಸಣಾ ಶಿಬಿರ ಜರುಗಿತು.

<><><>

ಬರುವ ಸೆಪ್ಟೆಂಬರ್ 15, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ. ಯಾದಗಿರಿ ಜಿಲ್ಲೆಯಲ್ಲಿ 60 ಕಿಲೋ ಮೀಟರ್ ಉದ್ದದ ಮಾನವ ಸರಪಳಿ ನಿರ್ಮಿಸಲು ಉದ್ದೇಶಿಸಲಾಗಿದೆ. ಯರಗೋಳ ಗ್ರಾಮದಿಂದ ಗೂಗಲ್ ಸೇತುವೆ ಗಡಿಯ ವರೆಗೆ, ಸುಮಾರು 23 ಜನ ವಸತಿಗಳ ಮೂಲಕ, ಮಾನವ ಸರಪಳಿ ನಿರ್ಮಿಸಲು ಯೋಜಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಬಿ.ಸುಶೀಲಾ ತಿಳಿಸಿದ್ದಾರೆ. ಬೀದರ್ ನಿಂದ ಚಾಮರಾಜನಗರದ ವರೆಗೆ ಬೃಹತ್ ಮಾನವ ಸರಪಳಿ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮಾನವ ಸರಪಳಿ ನಿರ್ಮಿಸುವ ಮೂಲಕ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ದಾರಿಯುದ್ದಕ್ಕೂ ಪಸರಿಸುವ ಉದ್ದೇಶ ಹೊಂದಲಾಗಿದೆ, ಎಂದರು.

<><><>

ಭಾರತೀಯ ವಾಯುಪಡೆ, ಬೀದರ್ ವಾಯು ನೆಲೆಯ, ಸೂರ್ಯಕಿರಣ ಏರೋಬ್ಯಾಟಿಕ್ ತಂಡ, ಬೀದರ ಕೋಟೆಯ ಮೇಲೆ, ಆಕರ್ಷಕ ಏರ್ ಶೋ ನಡೆಸಿತು. ಸೂರ್ಯ ಕಿರಣ ತಂಡದ ಲೀಡರ್ ಗ್ರುಪ್ ಕ್ಯಾಪ್ಟನ್ ಗುರುಪ್ರೀತಸಿಂಗ್ ಧಿಲ್ಲೋನ್ ನೇತೃತ್ವದಲ್ಲಿ ನಡೆದ ಏರ್ ಶೋ ಕಾರ್ಯಕ್ರಮದಲ್ಲಿ, 9 ಸೂರ್ಯಕಿರಣ ವಿಮಾನಗಳು ವಿವಿಧ ರೀತಿಯಲ್ಲಿ ಆಕರ್ಷಕ ಪ್ರದರ್ಶನ ನೀಡಿ, ನೋಡುಗರನ್ನು ಮಂತ್ರಮುಗ್ಧ ಗೊಳಿಸಿದವು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದಲ್ಲಿ ಕನ್ನಡದ ಸ್ವಾಭಿಮಾನಿ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದವರು, ಸಂಶೋಧಕ ಡಾಕ್ಟರ್ ಎಂ.ಎಂ ಕಲಬುರ್ಗಿಯವರು; ಪ್ರಾದೇಶಿಕವಾಗಿ ಕರ್ನಾಟಕತ್ವವನ್ನು ಕಟ್ಟಬಲ್ಲ ಕರ್ನಾಟಕಾ'ಲಜಿ ಬಗ್ಗೆ ಚಿಂತನೆ ನಡೆಸಿದವರು, ಎಂದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾಕ್ಟರ್ ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಧಾರವಾಡದ ಸೃಜನಾ ರಂಗಮಂದಿರದಲ್ಲಿ, ಡಾಕ್ಟರ್ ಎಂ.ಎಂ ಕಲಬುರ್ಗಿ ಅವರ 9ನೇ ಪುಣ್ಯ ಸ್ಮರಣೆ ಹಿನ್ನೆಲೆ, 'ಡಾಕ್ಟರ್ ಎಂ.ಎಂ ಕಲಬುರ್ಗಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಎಂಬ ವಿಷಯದ ಕುರಿತು, ಅವರು ಮಾತನಾಡಿದರು.

<><><>

ಡಾಕ್ಟರ್ ಪುರುಷೋತ್ತಮ ಬಿಳಿಮಲೆ ಧ್ವನಿ 56 ಸೆಕೆಂದುಗಳು

<><><>

ಪಂಪ ಪ್ರಶಸ್ತಿ ಪುರಸ್ಕೃತರು, ಸ್ವಾತಂತ್ರ್ಯ ಹೋರಾಟಗಾರರ ಜೀವನಗಾಥೆಗಳಾದ, ಅಜೇಯ, ಅದಮ್ಯ ಕೃತಿಗಳ ಲೇಖಕ ಬಾಬು ಕೃಷ್ಣಮೂರ್ತಿ ಅವರೊಂದಿಗೆ, ಧಾರವಾಡದ ಆಲೂರ ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ, 'ಚಿಂತನ ಮಂಥನ' ಸಂವಾದ ಕಾರ್ಯಕ್ರಮ ಜರುಗಲಿದೆ. ಧಾರವಾಡದ ವೀರ ಸಾವರಕರ ಗೆಳೆಯರ ಬಳಗ ಹಾಗೂ ರಾಷ್ಟ್ರೋತ್ಥಾನ ಪರಿಷತ್ ಈ ಕಾರ್ಯಕ್ರಮ ಆಯೋಜಿಸಿವೆ.

<><><>

ಕರ್ನಾಟಕದಲ್ಲಿ ಪ್ರಸಕ್ತ ಮುಂಗಾರು ಹಂಗಾಮಿಗೆ, ಬೆಂಬಲ ಬೆಲೆ ಯೋಜನೆಯಡಿ, ಉದ್ದು ಮತ್ತು ಸೋಯಾಬೀನ್ ಖರೀದಿಗೆ, ಕೇಂದ್ರ ಕೃಷಿ ಸಚಿವಾಲಯ ಅನುಮತಿಸಿದೆ ಎಂದು, ಕೇಂದ್ರ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಮುಕ್ತ ಮಾರುಕಟ್ಟೆಯಲ್ಲಿ ಈ ಬೆಳೆಗಳಿಗೆ ಬೆಲೆ ಕಡಿಮೆ ಇರುವುದರಿಂದ, ಕನಿಷ್ಟ ಬೆಂಬಲ ಬೆಲೆ ಯೋಜನೆ ಅಡಿ, ಉದ್ದು ಕ್ವಿಂಟಾಲ್‌ಗೆ 7 ಸಾವಿರದ 4 ನೂರು ರೂಪಾಯಿ ಹಾಗೂ ಸೋಯಾಬೀನ್ ಪ್ರತಿ ಕ್ವಿಂಟಾಲ್‌ಗೆ 4 ಸಾವಿರದ 8 ನೂರಾ 92 ರೂಪಾಯಿ, ನಿಗದಿ ಪಡಿಸಿದೆ ಎಂದು, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

<><><>

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ, ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಾಲ್‌ಗೆ 7 ಸಾವಿರದ 280 ರೂಪಾಯಿಯಂತೆ ಖರೀದಿಸಲಾಗುವುದು ಎಂದು, ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ.

<><><>

ನಾಡಿದ್ದು, ಸೆಪ್ಟೆಂಬರ್ 2ನೇ ತಾರೀಖಿನಿಂದ, ರಾಜ್ಯಾದ್ಯಂತ 31 ಜಿಲ್ಲೆಗಳ ಯಾವುದೇ ತಾಲೂಕಿನ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ, 'ಎನಿವೇರ್ ರಿಜಿಸ್ಟ್ರೇಷನ್' ಪ್ರಾವಧಾನದಡಿ, ಸ್ಥಿರಾಸ್ತಿಗಳ ನೊಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಈ ವರೆಗೆ ಸಾರ್ವಜನಿಕರು, ತಮ್ಮ ಸ್ಥಿರಾಸ್ತಿ ಇರುವ ವ್ಯಾಪ್ತಿಯ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಮಾತ್ರ, ದಸ್ತಾವೇಜನ್ನು ನೋಂದಣಿ ಮಾಡಲು ಅವಕಾಶವಿತ್ತು. ಇನ್ನು ಮುಂದೆ, ಎನಿವೇರ್ ರಿಜಿಸ್ಟ್ರೇಷನ್ ನಲ್ಲಿ ದಸ್ತಾವೇಜನ್ನು, ಸ್ಥಿರಾಸ್ತಿ ಇರುವ ಜಿಲ್ಲೆಯ ಯಾವುದಾದರೂ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಎನಿವೇರ್ ನೋಂದಣಿ ವ್ಯವಸ್ಥೆ, ಪಾರದರ್ಶಕತೆ ಮತ್ತು ಅನಗತ್ಯ ವಿಳಂಬವನ್ನು ತಡೆಗಟ್ಟುತ್ತದೆ. ಸ್ಲಾಟ್ ಲಭ್ಯವಿರುವಂತಹ ಕಚೇರಿಯನ್ನು ನೋಂದಣಿಗೆ ಆಯ್ಕೆ ಮಾಡಿಕೊಳ್ಳಲು ಇನ್ನು ಮುಂದೆ ಸಾಧ್ಯವಾಗಲಿದೆ ಎಂದು, ನೋಂದಣಿ ಮತ್ತು ಮುದ್ರಾಂಕ ಇಲಾಖೆ ತಿಳಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಮಧುರೈ–ಬೆಂಗಳೂರು ಸೇರಿದಂತೆ, ಮೂರು 'ವಂದೇ ಭಾರತ್' ರೈಲುಗಳಿಗೆ, ವಿಡಿಯೋ ಕಾನ್ಫರೆನ್ಸ್ ಮೂಲಕ ಇಂದು, ಚಾಲನೆ ನೀಡಲಿದ್ದಾರೆ. 'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮ ನಿರ್ಭರ್ ಭಾರತ್'ನ ಮಹತ್ವಾಕಾಂಕ್ಷೆ ಯೋಜನೆಗಳಡಿ, ಅತ್ಯಾಧುನಿಕ 'ವಂದೇ ಭಾರತ್ ಎಕ್ಸ್ ಪ್ರೆಸ್' ರೈಲುಗಳಿಗೆ ಚಾಲನೆ ನೀಡಲಾಗುತ್ತಿದೆ.

<><><>

ಭಾರತೀಯ ಹವಾಮಾನ ಇಲಾಖೆ, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಭಾರೀ ಮಳೆಯಾಗಲಿದೆ ಎಂದು, ಮುನ್ನೆಚ್ಚರಿಕೆ ನೀಡಿದೆ. ಉಡುಪಿ ಜಿಲ್ಲೆಗೆ ಇಂದು ಆರೆಂಜ್ ಅಲರ್ಟ್ ಹಾಗೂ ದಕ್ಷಿಣಕನ್ನಡ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಿಗೆ, ಇಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಕಲಬುರಗಿ, ಯಾದಗಿರಿ, ರಾಯಚೂರು, ಬೆಳಗಾವಿ ಹಾಗೂ ಕೊಡಗು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಇಂದು ರಾಜ ಭವನ ಚಲೋ ಆಯೋಜಿಸಿದೆ.

<><><>

ಉತ್ತರಕನ್ನಡ ಜಿಲ್ಲೆ ಶಿರೂರಿನಲ್ಲಿ ಸಂಭವಿಸಿದ, ಭೂ ಕುಸಿತದಲ್ಲಿ ಅನಾಥವಾದ ಎರಡು ಶ್ವಾನಗಳನ್ನು, ಉತ್ತರಕನ್ನಡ ಜಿಲ್ಲಾ ಪೊಲೀಸ್ ವರಿ ಾಧಿಕಾರಿ ನಾರಾಯಣ ಎಂ. ದತ್ತು ಪಡೆದಿದ್ದಾರೆ.

<><><>

ರಾಜ್ಯದ ಎಲ್ಲ 31 ಜಿಲ್ಲೆಗಳಾದ್ಯಂತ, ನಾಳೆ ಸೆಪ್ಟೆಂಬರ್ 1 ರಿಂದ, ಲೈವ್ ಸ್ಟಾಕ್ ಆಪ್ ಮೂಲಕ, ಪಶು ಸಂಗೋಪನಾ ಇಲಾಖೆ 21ನೇ ಜಾನುವಾರು ಗಣತಿ ಆಯೋಜಿಸಿದೆ.

<><><>

ಮಹಾರಾಷ್ಟ್ರ ನಾಗಪುರದ, ದೀಕ್ಷಾ ಭೂಮಿಗೆ ಭೇಟಿ ನೀಡ ಬಯಸುವವರು, ಸಮಾಜ ಕಲ್ಯಾಣ ಇಲಾಖೆ ಮೂಲಕ, ಅರ್ಜಿ ಸಲ್ಲಿಸಲು, ಇಂದು ಕೊನೆ ದಿನ.

<><><>

2023ನೇ ಸಾಲಿನ ಏಕಲವ್ಯ ಪ್ರಶಸ್ತಿಗಾಗಿ, ಅರ್ಜಿ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 16 ಕಡೆಯ ದಿನ ಎಂದು ಕ್ರೀಡೆ ಮತ್ತು ಯುವಜನ ಸೇವಾ ಇಲಾಖೆ ತಿಳಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಳಸಾ–ಬಂಡೂರಿ ಯೋಜನೆ; ಕೇಂದ್ರ ಪರಿಸರ ಸಚಿವಾಲಯದಿಂದ, ತೀರುವಳಿ ನೀಡಿಕೆ ನಿರೀಕ್ಷೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಬೆಳಗಾವಿ ಹಾಗೂ ಹುಬ್ಬಳ್ಳಿ ಮಧ್ಯೆ, ನೂರು ಎಕರೆ ಜಾಗೆಯಲ್ಲಿ, ಸ್ಟಾರ್ಟ್ ಅಪ್ ಪಾರ್ಕ್ – ಎಂ.ಬಿ.ಪಾಟೀಲ.
- ಬೆಂಬಲ ಬೆಲೆ ಯೋಜನೆ; ಉದ್ದು, ಸೋಯಾಬೀನ್ ಮತ್ತು ಸೂರ್ಯಕಾಂತಿ ಖರೀದಿಗೆ, ಕೇಂದ್ರದ ಅನುಮತಿ – ಪ್ರಲ್ಹಾದ ಜೋಶಿ.
- 'ಎನಿವೇರ್ ರಿಜಿಸ್ಟ್ರೇಷನ್' ಪ್ರಾವಧಾನ; ಸೆಪ್ಟೆಂಬರ್ 2ನೇ ತಾರೀಖಿನಿಂದ, ರಾಜ್ಯಾದ್ಯಂತ ಎಲ್ಲಿಯೂ ಸ್ಥಿರಾಸ್ತಿ ನೊಂದಣಿಗೆ ಅವಕಾಶ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>